ಬುಡನ್‌ಸಾಬರ ಪತ್ನಿಯ ನುಡಿಗಳ ಹಲುಬುವಿಕೆಗೆ ತಿರಸ್ಕಾರ ಮಾಡುವುದು ಆ ಸಂದರ್ಭದಲ್ಲಿ ಮೂರ್ಖತನವಾಗುತ್ತದೆ ಎಂದು ಯೋಚಿಸಿದ ಎಸ್.ಪಿ.ಯವರು ಪಿ.ಸಿ.ಗೆ ಸನ್ನೆ ಮಾಡಿದ್ದರು.

ಆ ಪಿ.ಸಿ. ಮುಂದೆ ಬಂದಾಗ ಎಲ್ಲರ ಕಂಗಳೂ ಆತಂಕದಿಂದ ಆ ಕಪ್ಪು ಮುದ್ದೆಯತ್ತಲೇ ನೆಟ್ಟಿದ್ದವು. ಅವನು ಮುಖಕ್ಕೆ ಬಲವಾಗಿಯೇ ಪಾಚಿಯೊಂದಿಗೆ ಅಂಟುಹಾಕಿದಂತೆ ಹಿಡಿದುಕೊಂಡಿದ್ದ ಮುಸುಕನ್ನು ಮೆಲ್ಲನೆ ಬಿಡಿಸಿ ಹಿಂದೆ ಹಾಕಿದ. ಒಂದೇ ಒಂದು ಕ್ಷಣವಷ್ಟೆ!!!?

ಅಷ್ಟು ಹೊತ್ತಿನತನಕ ಎಲ್ಲರನ್ನೂ ಸಮಾಧಾನಪಡಿಸುತ್ತಿದ್ದ ನಾರಾಯಣ ಭಟ್ಟರು ಭೂಮಿಯೇ ನಡುಗಿಹೋಗುವಂತೆ 'ಹೋ' ಎಂದು ಒಮ್ಮೆ ಅರಚಿ, ಹೆಣದ ಮೇಲೆ ತೊಪ್ಪನೆ ಬಿದ್ದು ಹೋದರು. ಪ್ರಕಾಶ್ ಭಾಟಿಯಾನ ಕಂಗಳು ಗರಬಡಿದಂತೆ ಅಲ್ಲಿಯೇ ನೆಟ್ಟುಬಿಟ್ಟವು. ಬಲಭಾಗದವರೆಲ್ಲಾ ಈಗ ಮುಖ–ಮಾತು, ಕಣ್ಣು–ನೋಟ, ಕಿವಿ–ಧ್ವನಿ ಎಲ್ಲವನ್ನೂ ಕಳೆದುಕೊಂಡು ಕೀಲುಗೊಂಬೆಗಳಂತೆ ಒಂದೊಂದೇ ಹೆಜ್ಜೆ ಹಿಂದೆ ಇಡತೊಡಗಿದಂತೆ 'ಏನಾಯ್ತು ಏನಾಯ್ತು' ಎಂಬ ಆತಂಕ, ಅಚ್ಚರಿ, ಆತುರಗಳಿಂದ ಎಡಭಾಗದವರು ಮುಂದೆ ಮುಂದೆ ಸರಿಯತೊಡಗಿದ್ದರು.

ಎಸ್.ಪಿ. ಸಾಹೇಬರು ಏನೂ ಅರಿಯದೇ ಪೆಚ್ಚಾಗಿ ಭಾಟಿಯಾನತ್ತ ತಿರುಗಿದರು. 'ಸಾರ್ ಅದೂ... ಅದೂ... ನಾರಾಯಣ ಭಟ್‌ರ ಮಗಳು ಶ್ರೀದೇವಿ' ಒಂದೊಂದೇ ಪದಗಳನ್ನು ಪರದಾಡಿ ಜೋಡಿಸಿ, ಹೇಳಿ ಮುಗಿಸುವಷ್ಟರಲ್ಲಿ ಎಡಭಾಗದ ಸೈನ್ಯ ಬಲಭಾಗದ ಮೇಲೆ ಏರಿ ಹೊರಟೇ ಹೋಗಿತ್ತು.

'ಸ್ಟಾಪ್ ಇಟ್. ಸ್ಟಾಪ್ ಇಟ್' ಎಸ್.ಪಿ.ಯವರ ಕೂಗು ಗಾಳಿಯಲ್ಲಿ ತೇಲಿಹೋದ ಕಾಲಕ್ಕೇ, ಪಿ.ಸಿ.ಗಳ ಲಾಠಿಗಳು ಕಂಡ ಕಂಡವರ ಮೂಳೆಯನ್ನು ಪಟಗುಟ್ಟಿಸಿ ಮುರಿಯುತ್ತಿದ್ದವು. ಕಪ್ಪು ಬುರ್ಖಾ ಹೊದ್ದ ಶ್ರೀದೇವಿಯ ಹೆಣದ ಮೇಲೆ ಕೆಂಪು ಶಲ್ಯ ಹೊದ್ದು, ಬಿದ್ದ ಭಟ್ಟರ ತಲೆಗೆ ನೀರು ತಟ್ಟುತ್ತಿದ್ದ ಭಾಟಿಯಾನ ಹಣೆಗೆ ದೊಡ್ಡ ಗಾತ್ರದ ಕಲ್ಲೊಂದು ರಾಚಿ ಬಂದು 'ಪಟ್' ಎಂದು ಬಡಿಯಿತು. ಏಟುಬಿದ್ದ ಸ್ಥಳದಿಂದ ರಕ್ತ ತೊಟತೊಟನೆ ಸುರಿವಾಗ ಭಾಟಿಯಾ ಮಾಡುವ ಕೆಲಸ ನಿಲ್ಲಿಸಿ, ಕೈಯಿಂದ ಒರೆಸಿ ನೋಡಿಕೊಂಡ. ಯಾಕೋ ಏನೋ ಆ ರಕ್ತ ಕಪ್ಪಾಗಿ ಕಾಣತೊಡಗಿ ಕಣ್ಣು ಕತ್ತಲಿಟ್ಟಂತಾಗಿ ಧಡಾರನೆ ನೆಲಕ್ಕೆ ಉರುಳಿದ.

ಕಪ್ಪು ಕೆರೆಯ ಏರಿ ಕುರುಕ್ಷೇತ್ರವಾಗಿತ್ತು!

★★★

ಮಾರನೆಯ ದಿನ ಪತ್ರಿಕೆಯ ಮುಖಪುಟಗಳಲ್ಲಿ 'ಕಪ್ಪಳ್ಳಿಯಲ್ಲಿ ಮರುಕಳಿಸಿದ ಕೋಮುಗಲಭೆ; ನಾಲ್ಕು ಸಾವು; ನಿಷೇಧಾಜ್ಞೆ ಜಾರಿ: ಪೊಲೀಸ್ ವರಿಷ್ಠಾಧಿಕಾರಿಗಳ ವಾಸ್ತವ್ಯ' ಈ ಮುಂತಾದ ವಿವರಗಳೊಂದಿಗೆ ಬಾಕ್ಸಿನಲ್ಲಿ 'ನಿವೃತ್ತ ನ್ಯಾಯಾಧೀಶರಾದ ಸುಂದರಮೂರ್ತಿಗಳಿಂದ ನ್ಯಾಯಾಂಗ ತನಿಖೆ'ಗಾಗಿ ಹೊರಡಿಸಿದ ಸರ್ಕಾರದ ಅಧಿಕೃತ ಆಜ್ಞೆಯೂ ಪ್ರಕಟವಾಗಿತ್ತು.

ಅದೇ ವೇಳೆಗೆ ಶ್ರೀದೇವಿಯ ಸುಂದರ ದೇಹ ತನ್ನ ಪ್ರತಿಯೊಂದು ಅಂಗಗಳನ್ನೂ ಕುಯ್ಸಿಕೊಂಡು, ಆಸ್ಪತ್ರೆಯವರು ದಯಪಾಲಿಸಿದ ಬಿಳಿವಸ್ತ್ರವನ್ನು ಸುತ್ತಿಕೊಂಡು ಶವಾಗಾರದಲ್ಲಿ ಶಾಂತವಾಗಿ ಬಿದ್ದಿತ್ತು. ಸತ್ತ ಶ್ರೀದೇವಿಗಾಗಿ ಒಡಲಲ್ಲಿ ಬೆಂಕಿಯಂಥ ದುಃಖವನ್ನು ಊರಿನ ಮಂದಿ ಇಟ್ಟುಕೊಂಡಿದ್ದರೂ ಹೊರಗೆ ಕಮ್ಮಕ್ ಕಿಮ್ಮಕ್ ಎನ್ನಲಿಲ್ಲ. ಅದೇ ಆಸ್ಪತ್ರೆಯ ವಾರ್ಡುಗಳು ಕಪ್ಪಳ್ಳಿಯ ಗಾಯಾಳುಗಳು, ಬಂಧುಬಳಗದವರಿಂದ ತುಂಬಿ ಗಿಜಿಗುಡುತ್ತಿದ್ದವು.

ಎಮರ್ಜೆನ್ಸಿ ವಾರ್ಡಿನಲ್ಲಿ ಸಾವು, ಬದುಕುಗಳ ನಡುವೆ ಹೋರಾಟ ಮಾಡುತ್ತಿದ್ದ